ಲಭ್ಯವಿರುವ ವಸತಿ ಗೃಹಗಳಲ್ಲಿ ಶೇಕಡ 50 ರಷ್ಟನ್ನು ಆನ್‌ಲೈನ್ ಮೂಲಕ ಕಾಯ್ದಿರಿಸುವ ಬಗ್ಗೆ ಪರಿಶೀಲಿಸಲಾಗುವುದು

693 (725) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) – ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೊಳ್ಳೇಗಾಲ ತಾಲ್ಲೂಕಿನ ಶ್ರೀ ಮಲೆ ಮಹದೇಶ್ವರ ದೇವಸ್ಥಾನಕ್ಕೆ ನೀಡಿರುವ ಅನುದಾನ ಮೊತ್ತವೆಷ್ಟು, ಈ ಅವಧಿಯಲ್ಲಿ ಹುಂಡಿಯಲ್ಲಿ ಹಾಗೂ ವಿವಿಧ ರೂಪದಲ್ಲಿ ಸಂಗ್ರಹವಾಗಿರುವ ಹಣದ ಮೊತ್ತವೆಷ್ಟು, (ವರ್ಷಾವಾರು ಮಾಹಿತಿ ಒದಗಿಸುವುದು) ,

ಆ) ಮೇಲ್ಕಂಡ ಸರ್ಕಾರದ ಅನುದಾನ ಹಾಗೂ ವಿವಿಧ ರೂಪಗಳಲ್ಲಿ ಸಂಗ್ರಹವಾಗಿರುವ ಹಣದಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆ ,

ಇ) ಇಲ್ಲಿರುವ ಅತಿಥಿ ಗೃಹಗಳ ಸಂಖ್ಯೆ ಎಷ್ಟು , ಇವುಗಳಲ್ಲಿರುವ ಕೊರಡಿಗಳ ಸಂಖ್ಯೆ ಎಷ್ಟು , ಕಳೆದ 3 ವರ್ಷಗಳಲ್ಲಿ ಇವುಗಳ ಅಭಿವೃದ್ಧಿಗಾಗಿ ವೆಚ್ಚ ಮಾಡಿರುವ ಹಣ ಎಷ್ಟು ,

ಈ) ಇಲ್ಲಿರುವ ಬಹುತೇಕ ಅತಿಥಿ ಗೃಹಗಳ ಕೊರಡಿಗಳಲ್ಲಿ ಬಿಸಿನೀರಿನ ಸೌಲಭ್ಯಗಳಿಲ್ಲದೇ ಇರುವುದರಿಂದ ಇಲ್ಲಿ ಮಳೆಗಾಲ ಮತ್ತು ಚಳಿಗಾಲದಲ್ಲಿ ತಂಗುವ ಯಾತ್ರಾರ್ಥಿಗಳು ತೀವ್ರವಾದ ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕ್ರಮ ಕೈಗೊಂಡು ಕೊರಡಿಗಳ ದುರಸ್ತಿ ಹಾಗೂ ಎಲ್ಲ ಕೊರಡಿಗಳಿಗೆ ಬಿಸಿನೀರಿನ ವ್ಯವಸ್ಥೆಯನ್ನು ಮಾಡಲಾಗುವುದೇ ,

ಊ) ಮೇಲ್ಕಂಡ ಅವಧಿಯಲ್ಲಿ ನರ್ಕಾರ ನೀಡಿರುವ ಹಾಗೂ ದೇವಸ್ಥಾನದ ಆದಾಯದಿಂದ ಬಂದಿರುವ ಹಣವು ಸದುಪಯೋಗವಾಗದೆ ದುರುಪಯೋಗವಾಗಿರುವ ಬಗ್ಗೆ ಸರ್ಕಾರ ತನಿಖೆ ನಡೆಸುವುದೇ ?

29/4

ಶ್ರೀ ಬಿ ನಾಗರಾಜಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಶ್ರೀ ಮಲೈ ಮಹದೇಶ್ವರ ಸ್ವಾಮಿ ದೇವಾಲಯಕ್ಕೆ ಸರ್ಕಾರದಿಂದ ಯಾವುದೇ ಅನುದಾನವನ್ನು ನೀಡಿರುವುದಿಲ್ಲ

ಈ ಅವಧಿಯಲ್ಲಿ ಹುಂಡಿ ಹಾಗೂ ವಿವಿಧ ಮೂಲಗಳಿಂದ ಸಂಗ್ರಹವಾಗಿರುವ ಆದಾಯ ಈ ಕೆಳಕಂಡಂತಿದೆ

	2003–04	2004–05	2005–06
ಹುಂಡಿಯಿಂದ	1,39,33,537	1,46,28,817	1,76,44,044
ಇತರೆ ಮೂಲಗಳಿಂದ	5,28,65,658	6,03,24,313	7,03,67,590
ಒಟ್ಟು ಆದಾಯ	6,67,99,195	7,49,53,130	8,80,11,634

ಆ) ಸರ್ಕಾರದಿಂದ ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಾಲಯಕ್ಕೆ ಯಾವುದೇ ಅನುದಾನವನ್ನು ನೀಡಿರುವುದಿಲ್ಲ ಆದರೆ ದೇವಾಲಯದಲ್ಲಿ ಬಂದ ಆದಾಯದಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ

ವರ್ಷ	ಕಾಮಗಾರಿಗಳ ಸಂಖ್ಯೆ	ಮೊತ್ತ
2003–04	37	336 71 ಲಕ್ಷ
2004–05	62	122 90 ಲಕ್ಷ
2005–06	52	135 10 ಲಕ್ಷ

ಇ) ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದ ವತಿಯಿಂದ 27 ಅತಿಥಿ ಗೃಹಗಳು ಇದ್ದು, ಇವುಗಳಲ್ಲಿ 406 ಕೊಠಡಿಗಳು ಇರುತ್ತವೆ ಇವುಗಳ ಅಭಿವೃದ್ಧಿಗಾಗಿ ಮಾಡಿರುವ ವೆಚ್ಚದ ವಿವರ ಈ ಕೆಳಕಂಡಂತಿದೆ

2003–04	2004–05	2005–06
9,94,087–00	10 62 563	21 42 890

ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಾಲಯಕ್ಕೆ ಸೇರಿದ ವಸತಿ ಗೃಹಗಳು ಶಿಥಿಲಗೊಂಡಿರುವುದಿಲ್ಲ ಮಹದೇಶ್ವರ ಭವನ, ಗುರುದರ್ಶಿನಿ ವೇದಾ

ಅತಿಥಿ ಗೃಹ ಮತ್ತು ಮಹದೇಶ್ವರ ಅತಿಥಿ ಗೃಹಗಳಿಗೆ ಸೋಲಾರ್ ವ್ಯವಸ್ಥೆ ಅಳವಡಿಸಿ, ಬಿಸಿನೀರಿನ ವ್ಯವಸ್ಥೆ ಕಲ್ಪಿಸಲಾಗಿತ್ತು

ಸದರಿ ಕಟ್ಟಡಗಳಿಗೆ ನೀರನ್ನು ಕೊಳವೆ ಬಾವಿಯಿಂದ ಸರಬರಾಜು ಆಗುತ್ತಿದ್ದು, ನೀರು ಗಡುಸಾದ ಕಾರಣ, ಸೋಲಾರ್‌ನಿಂದ ಅಳವಡಿಸಿರುವ ನೀರು ಸರಬರಾಜು ಪೈಪುಗಳು ಕಟ್ಟಿಕೊಂಡ ಕಾರಣ ನೀರು ಸರಬರಾಜು ಆಗುತ್ತಿಲ್ಲ ಇದನ್ನು ದುರಸ್ತಿಪಡಿಸಿದ್ದಾಗ್ಯೂ ಮತ್ತೆ ಮತ್ತೆ ಪೈಪುಗಳು ಕಟ್ಟಿಕೊಳ್ಳುತ್ತಿರುವುದರಿಂದ ಸೋಲಾರ್ ವ್ಯವಸ್ಥೆ ವಿಫಲವಾಗಿದೆ ಇದರಿಂದಾಗಿ ತೊಂದರೆಯಾಗಿರುವುದು ಗಮನಕ್ಕೆ ಬಂದಿದೆ

ಊ) ಪ್ರಸ್ತುತ ಕುಟೀರಗಳಲ್ಲಿ ಉರುವಲಿನಿಂದ ನೀರು ಕಾಯಿಸಿಕೊಳ್ಳುವ ವ್ಯವಸ್ಥೆ ಇದೆ ಕಾವೇರಿ ನದಿಯಿಂದ ಮಹದೇಶ್ವರ ಬೆಟ್ಟಕ್ಕೆ ನೀರು ತರುವ ಯೋಜನೆ ಕಾರ್ಯಗತವಾದ ತಕ್ಷಣ ಸೋಲಾರ್ ಅಳವಡಿಸಿರುವ ಹಾಗೂ ನೂತನವಾಗಿ ನಿರ್ಮಿಸಿರುವ ವಸತಿ ಗೃಹಗಳಿಗೆ ಆಧುನಿಕ ತಂತ್ರಜ್ಞಾನ ಉಪಯೋಗಿಸಿ, ಸೋಲಾರ್ ವ್ಯವಸ್ಥೆ ಅಳವಡಿಸಿ, ಬಿಸಿನೀರು ಒದಗಿಸುವುದನ್ನು ಕಾರ್ಯಗತಗೊಳಿಸಲಾಗುವುದು

ಕೊರಡಿಗಳ ದುರಸ್ಥಿ ಅಗತ್ಯ ಕಂಡುಬಂದ ಕೂಡಲೇ ಆಗಿಂದಾಗ್ಗೆ ಲೋಕೋಪಯೋಗಿ ಇಲಾಖೆ ಮೂಲಕ ದುರಸ್ತಿ ಮಾಡಿಸಲಾಗುತ್ತಿದೆ

ಋ) ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಾಲಯಕ್ಕೆ ಸರ್ಕಾರದಿಂದ ಯಾವುದೇ ಅನುದಾನ ನೀಡುತ್ತಿಲ್ಲ ದೇವಾಲಯಕ್ಕೆ ಭಕ್ತಾದಿಗಳಿಂದ ಬರುವ ಆದಾಯವು ಕಾನೂನಿಗೆ ಅನುಗುಣವಾಗಿ ಸದುಪಯೋಗ ಪಡಿಸಲಾಗುತ್ತಿದೆ ಹಾಗೂ ಸದರಿ ದೇವಾಲಯದ ಲೆಕ್ಕ–ಪತ್ರಗಳಲ್ಲಿ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲದಿಂದ ಪರಿಶೀಲನೆ ಮಾಡಿಸಲಾಗುತ್ತಿದೆ ಲೆಕ್ಕ ಪರಿಶೋಧನೆಯಲ್ಲಿ ಹಣ ದುರುಪಯೋಗವಾಗಿರುವುದು ಕಂಡುಬಂದಲ್ಲಿ ಸಂಬಂಧಿಸಿದವರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು

2005–06ನೇ ಸಾಲಿನಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳಾಗಿದ್ದ ಶ್ರೀಮತಿ ಕಮಲಮ್ಮ ಅವರು ಸರಕು ಖರೀದಿಯಲ್ಲಿ ಹಣದುರುಪಯೋಗ ಹಾಗೂ ಆಡಳಿತ ಮಂಜೂರಾತಿ ಪಡೆಯದೆ ಕಾಮಗಾರಿ ಮಾಡಿಸಿದ ವಿರುದ್ಧ ಬಂದ ದೂರಿನನ್ವಯ ಸದರಿ ಅಧಿಕಾರಿಗಳನ್ನು ದಿನಾಂಕ 7 12 2006ರಂದು

ವಿಚಾರಣೆಯನ್ನು ಬಾಕಿ ಇರಿಸಿ, ಅಮಾನತ್ತುಗೊಳಿಸಿ, ಸರ್ಕಾರ ಆದೇಶ ಹೊರಡಿಸಿದೆ

694 (1124) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) – ಮಾನ್ಯ ತೋಟಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಲು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ,

ಆ) ಇದಕ್ಕಾಗಿ ಈ ಸಾಲಿನ ಆಯವ್ಯಯದಲ್ಲಿ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ , ಈವರೆಗೆ ಬಿಡುಗಡೆ ಮಾಡಿದ ಹಣವೆಷ್ಟು , (ಜಿಲ್ಲಾವಾರು ವಿವರ ನೀಡುವುದು) ,

ಇ) ಈ ಹಣದಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳೇನು, (ಜಿಲ್ಲಾವಾರು ವಿವರ ಒದಗಿಸುವುದು) ,

ಈ) ಬೀದರ್ ಜಿಲ್ಲೆಯಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ (ತೋಟಗಾರಿಕೆ ಸಚಿವರು) –

ಅ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸಲು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ

ಆ) 2006–07ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಲಾದ ಒಟ್ಟು ಹಣ ರೂ 26050 55 ಲಕ್ಷಗಳು

ಈವರೆಗೆ ರೂ 16954 96 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ ಜಿಲ್ಲಾವಾರು ವಿವರಗಳನ್ನು ಕೆಳಗೆ ನೀಡಲಾಗಿದೆ

ಕ್ರ. ಸಂ	ಜಿಲ್ಲೆಗಳು	ಅನುದಾನ (ಲಕ್ಷ ರೂ)	
		ನಿಗದಿಯಾದುದು	ಬಿಡುಗಡೆ
1	ಬೆಂಗಳೂರು (ನ)	330 22	1583 61
2	ಬೆಂಗಳೂರು (ಗ್ರಾ)	1110 57	1081 85
3	ಚಿತ್ರದುರ್ಗ	1859 79	997 69
4	ಕೋಲಾರ	1276 76	1016 53
5	ಶಿವಮೊಗ್ಗ	1066 65	983 06